ತಾರಾಳ ಸೀರೆಯನ್ನು ಹಿಡಿದು ಎಳೆದಳು. ಆಕೆಯ ಸೆರಗಿನಲ್ಲಿ ತಿಂಗಳು ತುಂಬಿದ ನವಜಾತು ಶಿಶು. ಶಿಶುವಿನ ಮೇಲೆ ನೊಣಗಳು ಮುತ್ತಿದ್ದವು. ಆಕೆಯ ಮುಖದಲ್ಲಿ ವಿಚಿತ್ರವಾದ ಬೆಳಕು ಫಳಫಳಿಸುತ್ತಿತ್ತು. ಹೆಂಗಸು ತಾರಳನ್ನು ದೀನವಾಗಿ ಬೇಡುತ್ತಿದ್ದಳು. ಪರ್ಸ್‌ನಿಂದ ನೂರರ ನೋಟನ್ನು ತೆಗೆದು ಆಕೆಗೆ ಕೊಟ್ಟಳು. ಆ ಬುಡಕಟ್ಟು ಹೆಂಗಸು ಹಣವನ್ನು ತೆಗೆದುಕೊಳ್ಳಲಿಲ್ಲ. ಮಡಿಲಿನಿಂದ ಮಗುವನ್ನು ತೆಗೆದು ಆಕೆಗೆ ಕೊಡಲು ಪ್ರಯತ್ನಿಸಿದಳು. ಆಕೆ ಬೆಚ್ಚಿಬಿದ್ದಳು. ಪರ್ಸ್‌ನಿಂದ ಮತ್ತಷ್ಟು ನೋಟುಗಳನ್ನು ತೆಗೆದುಕೊಟ್ಟಳು. ಹೆಂಗಸು 'ಈ ಮಗುವನ್ನು ತೆಗೆದುಕೋ' ಎಂಬಂತೆ ಮಗುವನ್ನು ಆಕೆಯ ಕೈಯಲ್ಲಿಟ್ಟು ಓಡಿ ಹೋದಳು. ತಾರಾ ಮಗುವಿನ ಕಡೆ ಹೆಂಗಸಿನ ಕಡೆ ನೋಡುತ್ತಾ ನಿಂತುಬಿಟ್ಟಳು. ಗೈಡ್ ಮತ್ತು ಅಲ್ಲಿದ್ದ ಒಂದಿಷ್ಟು ಪ್ರವಾಸಿಗಳು ಆ ಹೆಂಗಸನ್ನು ನಿಲ್ಲಿಸಿ ಮಗುವನ್ನು ಆಕೆಗೆ ಕೊಟ್ಟರು. ತಾರಾ ಬೆರಗಾಗಿ ನೋಡುತ್ತಿದ್ದಳು. ದೋಣಿ ಚಲಿಸತೊಡಗಿತು. ಗಾಯಗೊಂಡ ಫ್ಲೆಮಿಂಗೊ ಹಕ್ಕಿಯೊಂದು ನೀರಿನ ಮೇಲೆ ತೇಲುತ್ತಿತ್ತು. ನೀರೆಲ್ಲಾ ಕೆಂಪಗಾಗಿದ್ದವು. ಸಾಯಂಕಾಲ ಆರು ಗಂಟೆಗೆ ಅವರು ಕಾಟೇಜು ಸೇರಿದರು. ತಾರಾ ರಾತ್ರಿ ತನ್ನ ಕಾಟೇಜಿನಲ್ಲಿ ಸತ್ಯಸುಂದರ್‌ನನ್ನು ಊಟಕ್ಕೆ ಆಹ್ವಾನಿಸಿದಳು. ಎಂಟು ಗಂಟೆಯ ಹೊತ್ತಿಗೆ ಗೈಡ್ ಸಹಾಯದಿಂದ ಆಕೆಯ ಕಾಟೇಜ್‌ಗೆ ಬಂದ ಸತ್ಯಸುಂದರ್. ಕಾಳಿಜೈ ಬೆಟ್ಟದ ಮೇಲೆ ನಡೆದು ಅವನ ಅಂಗಾಲುಗಳಿಗೆ ಬೊಬ್ಬೆ ಎದ್ದಿದ್ದವು. ನೋವಿನಿಂದ ನಡೆಯುತ್ತಿದ್ದ. ಅವರಿಬ್ಬರೂ ಕಾಟೇಜಿನ ಹೊರಗೆ ಕೂತರು. ಸರೋವರದ ಮೇಲೆ ಹಾರುತ್ತಿದ್ದ ಫ್ಲೆಮಿಂಗೊ ಹಕ್ಕಿಗಳ ಕುರಿತು ಅವನಿಗೆ ವಿವರಿಸಿದಳು. ಸರೋವರದ ಮೇಲೆ ಫ್ಲೆಮಿಂಗೊ ಹಕ್ಕಿಗಳ ರೆಕ್ಕೆಗಳ ಸದ್ದು ಕೇಳಿಸುತ್ತಲೇ ಇತ್ತು. 'ರಾತ್ರಿ ಗಾಢವಾಗುತ್ತಿದ್ದಂತೆಯೇ ಫ್ಲೆಮಿಂಗೋಗಳು ನೀರ ಮಡಿಲೊಳಕ್ಕೆ ಆತ್ಮಗಳನ್ನು ಜಾರಿಸುತ್ತವೆ. ಬೆಳಗ್ಗೆಗೆ ಆತ್ಮಗಳು ಮೊಳಕೆಯೊಡೆದಂತೆ ಪುನರುತ್ಥಾನಗೊಳ್ಳುತ್ತವೆ' ಎಂದಳು. ಸತ್ಯಸುಂದರ್ ಆ ಹಕ್ಕಿಗಳ ಸದ್ದು ಕೇಳಿಸುತ್ತಿದ್ದ ಕಡೆ ಆರಾಧನೆಯಿಂದ ನೋಡಿದ. ಆಕೆ ಅವನನ್ನು ನಡೆಸುತ್ತಾ ಕಾಟೇಜಿನೊಳಕ್ಕೆ ಕರೆದೊಯ್ದಳು. ಅವನ ಕಾಲಿನ ಬೊಬ್ಬೆಗಳಿಂದ ರಕ್ತ ಒಸರಿ ಫ್ಲೋರಿಂಗ್ ಮೇಲೆ ಕೆಂಪು ಕಲೆಗಳಾದವು.

ಸತ್ಯಸುಂದರ್ ಹಾಸಿಗೆಯ ಮೇಲೆ ಕುಳಿತ. ಅವನ ಗಾಯಗಳಿಗೆ ಔಷಧ ಹಚ್ಚುತ್ತಾ, ತನ್ನ ಕುರಿತು ಎಲ್ಲವನ್ನೂ ಅವನಿಗೆ ಹೇಳಿದಳು. ಸತ್ಯಸುಂದರ್‌ನೊಂದಿಗೆ ಪರಿಚಯ... ಆಕೆಯ ಬದುಕಿನ ಬಹುಮುಖ್ಯ ಘಟ್ಟವೆಂದು ಹೇಳಿದಳು. 'ಜೊತೆಯಾಗಿ ಬದುಕೋಣ' ಎಂದಳು ಮನಸ್ಪೂರ್ತಿಯಾಗಿ. ಮೃದುವಾಗಿ ತನ್ನ ಕೈಗಳಿಂದ ಅವನನ್ನು ಆವರಿಸಿದಳು. ಸತ್ಯಸುಂದರ್ ಪ್ರತಿಭಟಿಸಲಿಲ್ಲ. ಹೊರಗೆ ಹಕ್ಕಿಗಳ ಕಲರವ, ಚೀರಾಟಗಳು. ಮಹಾಸಮುದ್ರವೊಂದು ಭೋರ್ಗರೆದಂತೆ ಆಕೆ, ಶಾಂತ ಗಂಭೀರವಾಗಿ ಅವನು. ವಿಜೃಂಭಿಸಿದ ಕನಸಿನಂತೆ ಅವರು ತಳಕು ಹಾಕಿಕೊಂಡರು. ಅದ್ಭುತವಾದ ಕಾಮದಿಂದ ಜ್ವಲಿಸತೊಡಗಿದರು. ತನ್ನ ಬದುಕಿನೊಳಕ್ಕೆ ಪ್ರವೇಶಿಸಲು ಸತ್ಯಸುಂದರ್‌ನನ್ನು ಬೇಡಿಕೊಂಡಳಾಕೆ. ಕಥೆಯೊಳಗಿನ ಪ್ರೇಮಿಗಳಂತೆ ಇದ್ದುಬಿಡೋಣವೆಂದು ಉದ್ರೇಕಿಸಿದಳು. ಸತ್ಯಸುಂದರ್ ಏನೂ ಮಾತಾಡಲಿಲ್ಲ. ಆ ರಾತ್ರಿ ಆಕೆ ಸಮುದ್ರವಾದಳು. ಬೆಳದಿಂಗಳಾದಳು.

ಆನಂದದಿಂದ, ಖುಷಿಯಿಂದ ವಿವಶತೆಯಿಂದ ಆಕೆ ನಿದ್ರಿಸಿದಳು. ನಿದ್ರೆಯಿಂದ ಏಳುವಷ್ಟರಲ್ಲಿ ಸತ್ಯಸುಂದರ್ ಪಕ್ಕದಲ್ಲಿರಲಿಲ್ಲ. ಕರೆದಳು ಉತ್ತರವಿಲ್ಲ. ಇಡೀ ಕಾಟೇಜ್ ನಿಶ್ಯಬ್ದವಾಗಿತ್ತು. ಮಂಚದ ಮೇಲಿಂದ ಏಳುವಾಗ, ದಿಂಬಿನ ಕೆಳಗೆ ಬಿಳಿಬಣ್ಣದ ಕವರ್. ಕವರ್ ತೆಗೆದು ನೋಡಿದಳು. 'ಛಿನ್ನ ಮಸ್ತ' ದೇವತೆಯ ಫೋಟೊ. ಕತ್ತರಿಸಿದ ತನ್ನ ಶಿರವನ್ನು ಒಂದು ಕೈಯಲ್ಲಿ ಹಿಡಿದು ನಿಂತ ದೇವಿಯ ಫೋಟೊ.

ಸರೋವರದ ದಡದಲ್ಲಿ ಗುಂಪು ಗುಂಪಾಗಿ ಜನ ಸೇರಿದ್ದರು. ದಡದಲ್ಲಿ ಟೂರಿಸ್ಟ್ ಒಬ್ಬನ ಶವ. ಹೊರಗೆ ಸರೋವರದ ಮೇಲೆ ಫ್ಲೆಮಿಂಗೊ ಹಕ್ಕಿಗಳು ವಿಹ್ವಲತೆಯಿಂದ ಕೂಗುತ್ತಿದ್ದವು. ಅವು ಮರಳಿ ಹೋಗಬೇಕಾದ ಸಮಯ ಬಂದಿದೆ. ತಾರಾಳ ಕಾಟೇಜಿನ ಹೊರಗೆ ಮೆಟ್ಟಿಲ ಮೇಲೆ ಮಡಿಲಲ್ಲಿ ಮಗುವಿನೊಂದಿಗೆ ಬುಡಕಟ್ಟು ಹೆಂಗಸು ಆಕೆಯ ಬರುವಿಕೆಗಾಗಿ ಕಾಯುತ್ತಿದ್ದಳು. ಒಂದು ಹೊಸ ಜಗತ್ತಿಗಾಗಿ ಎದುರು ನೋಡುತ್ತಿರುವಂತೆ ಹೆಂಗಸಿನ ಕೈಯಲ್ಲಿನ ಮಗು ಕೈಗಳನ್ನು ಗಾಳಿಯಲ್ಲಿ ಆಡಿಸುತ್ತಾ ಬೆರಗಿನ ಕಣ್ಣುಗಳಿಂದ ಸುತ್ತಲೂ ನೋಡುತ್ತಿತ್ತು.

●